ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1. ಸರ್ಕಾರವು ರಾಜ್ಯದಲ್ಲಿ ಹೊಸ ಪಡಿತರ ಚೀಟಿಗಳನ್ನು ವಿತರಿಸುತ್ತಿದೆ

2. ಕಾರ್ಡೊಂದಕ್ಕೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಸೀಮೆ ಎಣ್ಣೆಯ ವಿತರಣಾ ಪ್ರಮಾಣವು ಈ ಕೆಳಕಂಡಂತಿರುತ್ತದೆ.

ಆ. ಪ. ಪ್ರದೇಶ	-	10 ರಿಂದ 15 ಲೀಟರ್‌ಗಳು
ಪಟ್ಟಣ	-	6 ರಿಂದ 10 ಲೀಟರ್‌ಗಳು
ಗ್ರಾಮಾಂತರ	-	4 ರಿಂದ 6 ಲೀಟರ್‌ಗಳು

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಸೀಮೆ ಎಣ್ಣೆಯ ಪ್ರಮಾಣವು ಪಡಿತರ ಚೀಟಿದಾರರ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿಲ್ಲವಾದ ಕಾರಣ ಈಗ ಹಂಚಿಕೆಯಾಗುತ್ತಿರು 54940 ಕೆ. ಎಲ್. ಪ್ರಮಾಣವನ್ನು 75,000 ಕೆ. ಎಲ್. ಗಳಿಗೆ ಹೆಚ್ಚಿಸ ಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

3. ಕೇಂದ್ರ ಸರ್ಕಾರದಿಂದ ಹೆಚ್ಚಿನ ಪ್ರಮಾಣದ ಸೀಮೆ ಎಣ್ಣೆ ಬಿಡುಗಡೆ ಯಾವಾಗ ಪ್ರತಿ ಪಡಿತರ ಚೀಟಿಗೆ ಹೆಚ್ಚು ಸೀಮೆ ಎಣ್ಣೆಯನ್ನು ವಿತರಣೆ ಮಾಡಲಾಗುವುದು.

ಬೆಂಗಳೂರು ನಗರದಲ್ಲಿ ಬೀದಿ ದೀಪಗಳ ವ್ಯವಸ್ಥೆ

331(610) ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದಲ್ಲಿರುವ ಬೀದಿ ದೀಪಗಳ ಸಂಖ್ಯೆ ಎಷ್ಟು?

2. ಬೀದಿ ದೀಪಗಳನ್ನು ಎಷ್ಟು ದಿವಸಗಳಿಗೊಂದು ಬಾರಿ ದುರಸ್ತಿ ಮಾಡಲಾಗುವುದು

3. ಬೀದಿ ದೀಪಗಳು ಸಾಕಷ್ಟು ಪ್ರಮಾಣದಲ್ಲಿ ದುರಸ್ಥಿಯಲ್ಲಿರುವುದರಿಂದ ತಿಂಗಳಿಗೊಂದು ಬಾರಿ ದುರಸ್ಥಿ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೇ?

4. ಹಾಗಿದ್ದಲ್ಲಿ ಎಂದಿನಿಂದ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. ಬೆಂಗಳೂರು ನಗರದಲ್ಲಿ : ಬೀದಿ ದೀಪಗಳು ಒಟ್ಟು 79723

2. ದುರಸ್ತಿಯಲ್ಲಿರುವ ರಸ್ತೆ ದೀಪಗಳನ್ನು ರಸ್ತೆ ದೀಪಗಳ ವಿಭಾಗಕ್ಕೆ ಕಾಲ ಕಾಲಕ್ಕೆ ಸರಿಪಡಿಸುತ್ತಿದೆ.

3. ದುರಸ್ಥಿಯಲ್ಲಿರುವ ಬೀದಿ ದೀಪಗಳನ್ನು ಸರ್ಕ್ಯೂಟಿವೈಸ್ ವರ್ಷಪೂರ್ತಿ ಸದಾಕಾಲ ದುರಸ್ಥಿ ಪಡಿಸಲಾಗುತ್ತಿದೆ.

4. ಸದಾ ಕಾಲ ಜಾರಿಯಲ್ಲಿರುತ್ತದೆ.

ಬೆಂಗಳೂರು ನಗರದಲ್ಲಿ ಕೊಳವೆ ಬಾವಿಗಳ ಅಶುದ್ಧ ನೀರು.

334 (564) ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದಲ್ಲಿ ಹಲವಾರು ಪ್ರದೇಶಗಳಲ್ಲಿನ ಕೊಳವೆ ಬಾವಿಗಳಿಂದ ನೀರಿನ ಮಾದರಿಗಳನ್ನು ಸಂಗ್ರಹಿಸಿ ಗಣಗಾರಿಕೆ ಮತ್ತು ಭೂಗರ್ಭ ಇಲಾಖೆ ಅಧ್ಯಯನ ನಡಿಸಿದೆಯೇ?

2. ಹಾಗಿದ್ದಲ್ಲಿ ಆ ಅಧ್ಯಯನದ ಪಲಿತಾಂಶದ ವಿವರ ನೀಡುವುದು.

3. ಈ ಅಶುದ್ಧತೆಗೆ ಕಾರಣಗಳೇನು?

4. ಸರ್ಕಾರವು ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. 1995ನೇ ಸಾಲಿನಲ್ಲಿ ಗಣಿಗಾರಿಕೆ ಮತ್ತು ಭೂ ಗರ್ಭ ಇಲಾಖೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೊಳಚೆ ಬಾವಿಗಳ ನೀರಿನ ಮಾದರಿಗಳನ್ನು ಸಂಗ್ರಹಿಸಿ ಇಲಾಖೆಯ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಅಧ್ಯಯನ ಮಾಡಿದ್ದಾರೆ.

2. ಗಣಿಗಾರಿಕೆ ಮತ್ತು ಭೂಗರ್ಭ ಇಲಾಖೆ 1995ನೇ ಸಾಲಿನಲ್ಲಿ 759 ಕೊಳವೆ ಬಾವಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸಿದ್ದಾರೆ ಸದರೀ ಇಲಾಖೆಯ ಅಭಿಪ್ರಾಯದಂತೆ ಶೇಕಡಾ 51 ಭಾಗ ಕುಡಿಯಲು ಯೋಗ್ಯವಲ್ಲವೆಂದು ವರದಿ ಮಾಡಿದ್ದಾರೆ.

3. ಕೊಳವೆ ಬಾವಿಗಳ ನೀರಿನಲ್ಲಿ ನೈಟ್ರೇಟ್ ಖನಿಜಾಂಶ ಜಾಸ್ತಿ ಕಂಡುಬಂದಿರುವ ಕಾರಣದಿಂದ ಕುಡಿಯಲು ಅಶುದ್ಧವೆಂದು ವರದಿ ಮಾಡಿದೆ.

4. ಬೆಂಗಳೂರು ಜಲಮಂಡಳಿಯು 5977 ಕೊಳವೆ ಬಾವಿಗಳನ್ನು ನಿರ್ವಹಣೆ ಮಾಡುತ್ತಿದೆ. ಸಂಚಾರಿ ಪ್ರಯೋಗಾಲಯದ ಮುಖಾಂತರ ಪ್ರತಿ ತಿಂಗಳು 10 ರಿಂದ 20 ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ. ಪ್ರಯೋಗಾಲಯದ ವಿಶೇಷಣಾ ವರದಿ ಪ್ರಕಾರ ಕುಡಿಯಲು ಯೋಗ್ಯವಲ್ಲದ ಮಾದರಿಗಳ ಸಂಖ್ಯೆ ಬಹಳ ಕಡಿಮೆ ಇರುವುದು ಕಂಡು ಬಂದಿದೆ. ಉದಾಹರಣೆಗೆ ಸೆಪ್ಟೆಂಬರ್ 97 ರಿಂದ ಫೆಬ್ರವರಿ 98ರ ಅವಧಿಯಲ್ಲಿ 84 ಮಾದರಿಗಳನ್ನು ವಿಶ್ಲೇಷಿಸಲಾಗಿದೆ. ಅವುಗಳ ಪೈಕಿ 9 ಮಾದರಿಗಳು ತೃಪ್ತಿಕರವಲ್ಲವೆಂದು